ಮಾನ್ಯ ವಿರೋಧಪಕ್ಷದ ನಾಯಕರು ಈಗತಾನೆ ಆ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಮಾನ್ಯ ಸಹಕಾರ ಸಚಿವರು ಬೇರೆ ಕೆಲಸದ ಕಾರಣ ಈಗ ಸದನಕ್ಕೆ ಬಂದಿಲ್ಲ. ಈ ವಿಚಾರದ ಬಗ್ಗೆ ಎರಡು ಮೂರು ದಿವಸಗಳಲ್ಲಿ ನಾನೇ ಅಧಿಕಾರಿಗಳೊಡನೆ ಚರ್ಚೆ ಮಾಡಿ ತಮ್ಮ ಕಡೆಗೆ ಬಂದು ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತಿದೆ ಎಂದು ಮುಕ್ತವಾಗಿ ತಿಳಿಸುತ್ತೇನೆ.

ಆ) ವಿಷಯ: ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಮೈಸೂರಿನ ಕಾಲೇಜಿನಲ್ಲಿ ಮಾತನಾಡುವಾಗ ಲೀಗಲ್ ಪ್ರೊಫೆಷನ್ ಹಾಗೂ ನ್ಯಾಯಾಧೀಶರ ಬಗ್ಗೆ ಕೆಲವು ಅಪಮಾನಕರ ಹೇಳಿಕೆ ನೀಡಿರುವುದು.

+ ಶ್ರೀ.ಕೆ.ಎನ್.ಸುಬ್ಬಾರೆಡ್ಡಿ(ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾದ ಶ್ರೀ ವಿಶ್ವನಾಥ್‌ರವರು ಮೈಸೂರಿನ ಲಾ ಕಾಲೇಜಿನಲ್ಲಿ ಮಾತನಾಡುವಾಗ ಲೀಗಲ್ ಪ್ರೊಫೆಶನ್ ಹಾಗೂ ನ್ಯಾಯಾಧೀಶರ ಬಗ್ಗೆ ಕೆಲವು ವಿಷಯಗಳನ್ನು ಹೇಳಿರುವುದು ಬಹಳ ಅವಮಾನಕರವಾದ ಸಂಗತಿಯಾಗಿದೆ. ಬಹುಶಃ ವಿಶ್ವನಾಥ್‌ರವರು ಅನೇಕ ವಿವಾದಗಳಲ್ಲಿ ಸಿಕ್ಕಿದ್ದಾರೆ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿರುವ ಡೊನೇಷನ್ ಹಾವಳಿಯನ್ನು ತಡೆಯಲು ಕ್ರಮ ತೆಗೆದುಕೊಳ್ಳಬೇಕು. ಮಾಜಿ ಮಂತ್ರಿಗಳಾಗಿದ್ದ ಗೋವಿಂದೇಗೌಡರು ಅನೇಕ ಖಾಸಗಿ ಶಾಲೆಗಳಿಗೆ ಭೇಟಿ ನೀಡಿದ್ದರು, ನಾನು ಅನೇಕ ಸಾರಿ ವಿಶ್ವನಾಥ್‌ನವರನ್ನು ಭೇಟಿ ಮಾಡಿ ನಮ್ಮ ಕ್ಷೇತ್ರದಲ್ಲಿ ಅನೇಕ ಖಾಸಗಿ ಶಾಲೆಗಳಿವೆ ಭೇಟಿ ನೀಡಿ ಎಂದು ಆಹ್ವಾನಿಸಿದ್ದೆ, ಅವರು ಬರುತ್ತೇನೆಂದು ಹೇಳುತ್ತಾರೆ, ಬರುತ್ತಿಲ್ಲ, ಮಾನ್ಯ ಸಚಿವರು ವಕೀಲರು ಆರ್ಗ್ಯುಮೆಂಟ್ ಮಾಡುವ ವಿಚಾರದಲ್ಲಿ ಅನೇಕ ಪುಸ್ತಕಗಳನ್ನು ತೋರಿಸುತ್ತಾರೆ, ಇಷ್ಟು ಫೀ ಆಗುತ್ತದೆನ್ನುವುದು, ಹೈಕೋರ್ಟ್ ಎದುರಿಗೆ ಎಲ್ಲಿ ವಕೀಲರು ಓಡಾಡುತ್ತಾರೊ ಅಲ್ಲಿ ಹುಲ್ಲು ಕೂಡ ಬೆಳೆಯುವುದಿಲ್ಲವೆನ್ನುವ ಮಾತುಗಳನ್ನಾಡಿದ್ದಾರೆ, ಅವರು ಕೂಡ ವಕೀಲರಾಗಿದ್ದವರು, ಇದು ಅವಮಾನಕರವಾದ ಸಂಗತಿ. ಲೀಗಲ್, ಮೆಡಿಕಲ್ ಯಾವುದೇ ವೃತ್ತಿ ಇರಲಿ, ಹಾಗಾದರೆ ಎಲ್ಲಾ ರಾಜಕೀಯದವರನ್ನು ಕೂಡ ಬೈಯಬಹುದಲ್ಲ ರಾಜಕೀಯ ಕೂಡ ಒಂದು ವೃತ್ತಿಯೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಯಾರಾದರೂ ರಾಜಕೀಯವನ್ನು ಒಂದು ವೃತ್ತಿಯೆಂದು ತಿಳಿದುಕೊಂಡಿದ್ದರೆ, ಇದು ವೃತ್ತಿಯಲ್ಲವೆಂದು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಕೆ.ಎಸ್.ಸುಬ್ಬಾರೆಡ್ಡಿ: ತಾವು ಕೂಡ ವಕೀಲರಾಗಿದ್ದವರು, ಬಹುಶಃ ವಕೀಲ ವೃತ್ತಿಯಲ್ಲಿ ತಾವು ಫ್ಲಾಸ್ಪರಸ್ ಆಗಲಿಲ್ಲವೇನೊ, ವಕೀಲ ವೃತ್ತಿಯಲ್ಲಿ

ಮುಂದುವರೆಯಲಾಗಲಿಲ್ಲವೇನೊ, ರಾಜಕೀಯಕ್ಕೆ ಬಂದಿದ್ದೀರೇನೊ, ಕಾರಣ ಏನೇ ಇರಬಹುದು. Whatever it may be, what is required is that you cannot degrade any profession. ವೈಯಕ್ತಿಕವಾಗಿ ಆಗಿದ್ದರೆ ಕಾನೂನು ಬದ್ದವಾಗಿ ಏನಾಗಬೇಕೊ ಅದಾಗುತ್ತದೆ, ಅಂತಹ ಉದಾಹರಣೆ ಅವರು ವಕೀಲ ವೃತ್ತಿಯಲ್ಲಿದ್ದಾಗ ಏನಾದರು ಇದ್ದರೆ ಹೇಳಲಿ, ಆದರೆ ವಕೀಲರ ಬಗ್ಗೆ ನ್ಯಾಯಧೀಶರ ಬಗ್ಗೆ ಈ ರೀತಿ ಹೇಳುವುದು ನಿವಾಗಿಯು ಕೂಡ ತಪ್ಪು.

ಶ್ರೀ ಹೆಚ್.ವಿಶ್ವನಾಥ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಹೇಳುವಂತೆ ನಾನು ವಕೀಲ ವೃತ್ತಿಗೆ ಅಗೌರವ ತರತಕ್ಕಂಥ ಮಾತುಗಳನ್ನು ಹೇಳಿಲ್ಲ. ಆದರೆ ವೃತ್ತಿಯಲ್ಲಿರುವ ಕೆಲವರ ಪ್ರವೃತ್ತಿಯ ಬಗ್ಗೆ ನಾನು ಮಾತನಾಡಿರುವುದು ನಿಜ.

೧೧.೫೦ ಎ.ಎಮ್

ಜನಸಾಮಾನ್ಯರ ದುಗುಡಗಳ ಬಗ್ಗೆ ಕಾನೂನು ವೃತ್ತಿಯಲ್ಲಿರತಕ್ಕಂಥವರು, ಪ್ರವೃತ್ತಿಯಲ್ಲಿ ಜನಪೀಡಕರಾಗಿರುವವರ ಬಗ್ಗೆ ನಾನು ಹೇಳಿರತಕ್ಕಂಥಾದ್ದು. ಸಾಮಾನ್ಯನ ಬವಣೆಗಳನ್ನು ನಾನೂ ಒಬ್ಬ ಸಾಮಾನ್ಯನಾಗಿ ಪ್ರದರ್ಶನ ಮಾಡಿದ್ದೇನೆಯೇ ಹೊರತು ಯಾರಿಗೂ ಅಗೌರವ ತರತಕ್ಕಂಥ ದೃಷ್ಟಿಯಲ್ಲಿ ನಾನೂ ಸಹ ಒಬ್ಬ ವಕೀಲನಾಗಿ, ವಕೀಲ ವೃತ್ತಿಯಲ್ಲಿ ಇದ್ದುಕೊಂಡು ಹೇಳಿರತಕ್ಕಂಥಾದ್ದು ಅಲ್ಲ. ನನ್ನ ಈ ಮಾತಿಗೆ, ವಾದಕ್ಕೆ, ವೃತ್ತಿಯಲ್ಲಿರತಕ್ಕಂಥ ವಕೀಲರು ಪ್ರತಿವಾದವನ್ನು ಮಾಡಬಹುದೇ ಹೊರತು ಪ್ರತಿಭಟನೆ ಮಾಡುವುದು ಸಲ್ಲದು ಎಂದು ಹೇಳುತ್ತಿದ್ದೇನೆ. ನಾನು ಮತ್ತೂ ಮುಂದುವರೆದು ಹೇಳುತ್ತೇನೆ, ವಕೀಲಿ ವೃತ್ತಿಯಲ್ಲಿದ್ದುಕೊಂಡು ಪ್ರವೃತ್ತಿಯಲ್ಲಿ ಜನಪೀಡಕರಾಗಿರುವವರ ಬಗ್ಗೆ, ಪ್ರಸ್ತುತ ಇರುವ ಕಾನೂನುಗಳಿಂದ ಜನಸಾಮಾನ್ಯರು ಪಡುತ್ತಿರತಕ್ಕಂಥ ಬವಣೆಯ ಬಗ್ಗೆ ಯಾವುದೇ ವೇದಿಕೆಯಲ್ಲಾದರೂ ನಾನು ಚರ್ಚೆಗೆ ಸಿದ್ಧ. ಮಾನ್ಯ ಸುಬ್ಬಾರೆಡ್ಡಿಯವರು ಒಂದು ವೇದಿಕೆಯನ್ನು ನಿರ್ಮಾಣ ಮಾಡಿ ಕರೆಯುವುದಾದರೆ ನಾನು ಚರ್ಚೆ ಮಾಡಲು ಸಿದ್ಧ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: ಆಯಿತು, ರೆಡ್ಡಿಯವರೇ ಇಷ್ಟು ಸಾಕು. ಅವರು ಸರಿಯಾಗಿ ಉತ್ತರ ಕೊಟ್ಟಿದ್ದಾರೆ. ನೀವು ಒಂದು ವೇದಿಕೆಯನ್ನು ಅರೇಂಜ್ ಮಾಡಿ, ಅಲ್ಲಿ ಚರ್ಚೆ ಮಾಡಬಹುದು ಎಂದು ಹೇಳುತ್ತಿದ್ದಾರಲ್ಲ. ವಕೀಲಿ ವೃತ್ತಿಯ ಬಗ್ಗೆ ಅವಹೇಳನ ಮಾಡಿಲ್ಲ ಕೆಲವರು ನಡೆದುಕೊಳ್ಳುವ ರೀತಿಯ ಬಗ್ಗೆ ಮಾತ್ರ ಮಾತನಾಡಿದ್ದೇನೆ ಎಂದು ಹೇಳಿದ್ದಾರೆ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಮಂತ್ರಿಗಳು, ತಾವು ವಕೀಲಿ ವೃತ್ತಿಯ ಬಗ್ಗೆ

ಹೇಳಿಲ್ಲ, ಆ ವೃತ್ತಿಯಲ್ಲಿ ಇದ್ದುಕೊಂಡು ಜನಪೀಡಕರಾಗಿರುವವರ ಬಗ್ಗೆ ಹೇಳಿದ್ದೇನೆ ಎಂದು ಹೇಳಿದ್ದಾರೆ. ಅದರಲ್ಲಿ ತಮಗೇನು ಅಸಂತೋಷ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ವಕೀಲಿ ವೃತ್ತಿಯ ಬಗ್ಗೆ ಮಾತನಾಡಿದ್ದಾರೆ ಮತ್ತು ಇದರಲ್ಲಿರುವ ಅನೇಕರು ಪ್ರಾಡ್ಯುಲೆಂಟ್ ಎಂದು ಕೆಲವು ವಿಷಯಗಳನ್ನು ಹೇಳಿದ್ದಾರೆ. ಅಂಥಾದ್ದೇನಾದರೂ ಇದ್ದರೆ ಸ್ಪಷ್ಟವಾಗಿ ತಿಳಿಸಲಿ.

ಶ್ರೀ ಹೆಚ್.ವಿಶ್ವನಾಥ್:- ಸುಬ್ಬಾರೆಡ್ಡಿಯವರೇ, ತಮಗೆ ನನ್ನ ಭಾಷೆ ಅರ್ಥವಾಯಿತೇ? ನಾನು ವೃತ್ತಿಯ ಬಗ್ಗೆ ಮಾತನಾಡಿಲ್ಲ, ಕೆಲವರ ಪ್ರವೃತ್ತಿಯ ಬಗ್ಗೆ ಮಾತನಾಡಿದ್ದೇನೆ ಎಂದು ನೀವು ತಿಳಿದುಕೊಳ್ಳಬೇಕು.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ:- ಇದನ್ನು ಎಲ್ಲಾ ವೃತ್ತಪತ್ರಿಕೆಗಳಲ್ಲೂ ಹೈಲೈಟ್ ಮಾಡಿದ್ದಾರೆ. ಈ ಪ್ರೊಫೆಷನ್ ಬಗ್ಗೆ ಬಹಳ ಡೀಗ್ರೇಡ್ ಮಾಡಿದ್ದಾರೆ.

ಅಧ್ಯಕ್ಷರು:- ತಾವು ಆ ರೀತಿ ಹೇಳಿಲ್ಲ ಎಂದು ಅವರು ಜವಾಬ್ದಾರಿಯಿಂದ ಈ ಸದನದಲ್ಲಿ ನಿಂತು ಹೇಳುತ್ತಿದ್ದಾರೆ. ಇಲ್ಲಿಗೆ ಈ ವಿಷಯ ಸಾಕು.

೩. ಅರ್ಜಿಗಳನ್ನೊಪ್ಪಿಸುವುದು.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ತುರುವೇಕೆರೆ): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ ಈ ಕೆಳಕಂಡ ಅರ್ಜಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

(೧) ತುರುವೇಕೆರೆ ತಾಲ್ಲೂಕು ಕಸಬಾ ಹೋಬಳಿ, ಬುಗುಡನಹಳ್ಳಿ ಹಾಗೂ ಅಕ್ಕಪಕ್ಕದ ಗ್ರಾಮಗಳಿಗೆ ರಸ್ತೆ ಸಂಪರ್ಕ ಕಡಿದು ಹೋಗಿರುವುದರಿಂದ, ಸೇತುವೆ ಮತ್ತು ರಸ್ತೆ ಮಾಡಿ ಕೊಡುವ ಬಗ್ಗೆ ಅರ್ಜಿ.

(೨) ತುರುವೇಕೆರೆ ತಾಲ್ಲೂಕು ಮಾರಸಂದ್ರ ಹಾಗೂ ಅಡವನಹಳ್ಳಿ ಮಧ್ಯೆ ಮೊನ್ನೆ ಬಿದ್ದಂಥ ಭಾರೀ ಮಳೆಯಿಂದ ಹಳ್ಳ ನಿರ್ಮಾಣವಾಗಿರುವುದರಿಂದ, ದೊಡ್ಡಹಳ್ಳದ ಸೇತುವೆ ಮತ್ತು ರಸ್ತೆ ನಿರ್ಮಾಣ ಮಾಡಿ ಕೊಡುವ ಬಗ್ಗೆ ಅರ್ಜಿ.

(೩) ತುರುವೇಕೆರೆ ತಾಲ್ಲೂಕು, ದಂಡಿನಶಿವರ ಹೋಬಳಿ, ಸಂಪಿಗೆ ಗ್ರಾಮ ಪಂಚಾಯಿತಿಯ ದೋಣಕೆರೆ ಗ್ರಾಮದಲ್ಲಿ ಮೊನ್ನೆ ಬಿದ್ದ ಭಾರೀ ಮಳೆಯಿಂದ ಹೇಮಾವತಿ ನದಿ ನೀರಿನಲ್ಲಿ ಕೊಚ್ಚಿ ಹೋಗಿರತಕ್ಕಂಥ ಸೇತುವೆಯನ್ನು ನಿರ್ಮಾಣ ಮಾಡುವ ಬಗ್ಗೆ ಅರ್ಜಿ.